ನೀರು ತುಂಬಿಸಿ ಅಲ್ಲಮಪ್ರಭುವಿಗೆ ಕೊಟ್ಟಿದ್ದರು. ಅಲ್ಲಮಪ್ರಭುವಿಗೂ ಒಂದಿಷ್ಟು ಬಾಯಾರಿಕೆ ಉಂಟಾಗಿದ್ದರಿಂದ ಒಂದೂವರೆ ಗ್ಲಾಸ್ ನೀರು ಕುಡಿದಿದ್ದ. ''ಬಹಳ ಹಿಂದೆ ಶಿರಸಿಯ ಜಾತ್ರೆಗೆ ಬಂದಿದ್ದಾಗ ಬನವಾಸಿಗೆ ಬಂದಿದ್ದುಂಟು. ಈಗ ದೇವಸ್ಥಾನದ ಚಿತ್ರಣವೇ ಮರೆತು ಹೋದಂತಿದೆ.'' ಎಂದು ಮಹಾಬಲೇಶ್ವರ ಭಟ್ಟರು ತಮ್ಮ ಮಣೆಯ ಮೇಲೆ ಕುಳಿತಿವರು ಅಲ್ಲಮಪ್ರಭುವಿನ ಕಣ್ಣಲ್ಲಿ ಕಣ್ಣಿಟ್ಟು, ''ನಿಮಗಿನ್ನೂ ಲಗ್ನವಾಗಿಲ್ಲ ಅಲ್ಲವಾ...'' ಎಂದು ಕೇಳಿದ್ದರು. ಅಲ್ಲಮಪ್ರಭುವಿಗೆ ಆಶ್ಚರ್ಯವಾಗಿ, ''ಹೌದು ಭಟ್ಟರೆ...'' ಎಂದಿದ್ದ.

''ಅರ್ಥವಾಯಿತು...'' ಎಂದಿದ್ದರು ಭಟ್ಟರು.

''ಏನು?...'' ಕೇಳಿದ್ದ ಅಲ್ಲಮಪ್ರಭು.

''ನಿಮ್ಮ ವಂಶಕ್ಕೆ ನಿರಂತರ ಸ್ತ್ರೀ ದೋಷ ಕಾಡುತ್ತಿದೆ. ಜೊತೆಗೆ ಪ್ರೇತಶಾಪ, ಪಿತೃ ದೋಷಗಳಿಗೂ ಕೂಡಾ ನಿಮ್ಮ ಕುಟುಂಬ ಒಳಗಾಗಿದೆ. ಇಂಥ ದೋಷ ಮತ್ತು ಕಾಟ ಇರುವವರಿಗೆ ಕುಟುಂಬ ಸೌಖ್ಯ, ಸ್ತ್ರೀ ಸೌಖ್ಯ ಮರೀಚಿಕೆಯೇ ಸರಿ. ಆದರೆ, ನಿಮ್ಮನ್ನು ಆರ್ಥಿಕ ಕ್ಷೋಭೆಯೇನೂ ಕಾಡುತ್ತಿಲ್ಲವೆಂದು ಗ್ರಹಗತಿಗಳು ಹೇಳುತ್ತಿವೆ. ದೇಹಬಾಧೆಗೆ ಏನು ಪರಿಹಾರ ಮಾಡಿಕೊಳ್ಳುತ್ತಿದ್ದಿರಿ, ಹದಿನೆಂಟಕ್ಕೇ ಪ್ರಾಯ ಮೈ ತುಂಬಿಕೊಂಡು ಕಾಡಿಸಲಿಕ್ಕೆ ಶುರುಮಾಡುತ್ತದಲ್ಲ...'' ಎಂದು ನಗುತ್ತಾ ಹೇಳಿದ ಭಟ್ಟರ ಮಾತುಗಳಲ್ಲಿ ಗಂಭೀರತೆ ಮತ್ತು ಹಾಸ್ಯ ಎರಡೂ ಮಿಳಿತಗೊಂಡಿದ್ದವು. ಅಲ್ಲಮಪ್ರಭುವಿಗೆ ಒಂದಿಷ್ಟು ಇರುಸುಮುರುಸು ಆದಂತೆನಿಸಿತು.

''ಹೈಸ್ಕೂಲು ಓದುತ್ತಿರುವಾಗಿನಿಂದಲೂ ಹಸ್ತಮೈಥುನ ಮಾಡಿಕೊಳ್ಳುತ್ತಿದ್ದೇನೆ ಭಟ್ಟರೆ.'' ಥಟ್ಟನೆ ಹೇಳಿಬಿಟ್ಟಿದ್ದ.

''ನೀವು ಸ್ವಲ್ಪ ಘಾಟಿಯೇ ಇದ್ದೀರಿ. ಆದರೂ ಸ್ತ್ರೀ ಸಖ್ಯ ಇಲ್ಲದ ಸುಖ ಎಂಥ ಸುಖ ಬಿಡಿ. ನಿಮ್ಮ ಎಲ್ಲಾ ಪೀಡನೆಗಳ ಪರಿಹಾರಕ್ಕೆ ಗೋಕರ್ಣ ಸರ್ಪಪೂಜಾ ಮಾಡಿಸಿದರೆ ಒಳ್ಳೆಯದು.''

''ಸರ್ಪಪೂಜಾ ಅಂದರೇನು?'' ಕೇಳಿದ್ದ ಅಲ್ಲಮಪ್ರಭು ತಿಳಿದುಕೊಳ್ಳುವ ಆಸಕ್ತಿಯಿಂದ.



''ಗೋಕರ್ಣ ಸರ್ಪಪೂಜೆಯಲ್ಲಿ ಮೋಕ್ಷ ನಾರಾಯಣ ಬಲಿ, ತ್ರಿಪಿಂಡಿ ಶ್ರಾದ್ಧ, ತಿಲ ಹವನ, ಪಿತೃ ಶಾಪ, ಪ್ರೇತ ದೋಷ, ಕ್ಷೇತ್ರ ವಿಧಿ, ನಾಗಬಲಿ ಇವಿಷ್ಟೂ ಪೂಜೆಗಳು ಸೇರುತ್ತವೆ. ಈ ಪೂಜೆಯನ್ನು ನೆರವೇರಿಸಿದರೆ ನಿಮ್ಮನ್ನು ಕಾಡುತ್ತಿರುವ ಎಲ್ಲಾ ದೋಷಗಳೂ ಅತ್ಯಂತ ಬೇಗನೆ ನಿವಾರಣೆಯಾಗುತ್ತವಲ್ಲದೆ ಕಾಡುತ್ತಿರುವ ಮಾನಸಿಕ ಕ್ಷೋಭೆ ಕೂಡಲೇ ಬಿಡುಗಡೆಯಾಗ್ತದೆ. ನಮ್ಮ ಮನೆಯಲ್ಲೇ ಪೂಜೆ ನೆರವೇರಿಸಬಹುದು. ಆದರೆ, ಕೋಟಿತೀರ್ಥದ ಮಂಟಪದಲ್ಲೋ, ಮೆಟ್ಟಿಲುಗಳ ಮೇಲೋ ಮಾಡಿದರೆ